ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ-583101
OFFICE OF THE DEPUTY COMMISSIONER, BELLARY DISTRICT, BELLARY-583101
Telephone : 08392-277100. Fax : 08392-272538 Email: dcbellary@gmail.com

ನಂ.ಕಂ.ಸಿಬ್ಬಂದಿ.2/ 245/ 2014-15 ದಿನಾಂಕ: 26-02-2016

## : : ಗ್ರಾಮ ಲೆಕ್ಕಿಗರ ಅಂತಿಮ ಆಯ್ಕೆ ಅಧಿಸೂಚನೆ : :

ವಿಷಯ: ಬಳ್ಳಾರಿ ಜಿಲ್ಲೆಯಲ್ಲಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 19 ಹಾಗೂ ಸ್ಥಳಿಯೇತರ ವೃಂದದಲ್ಲಿ ಖಾಲಿ ಇರುವ 42 ಒಟ್ಟು 61 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡುವ ಸಂಭಂಧ ಅಂತಿಮ, ಆಯ್ಕೆಯ ಅಧಿಸೂಚನೆ ಹೊರಡಿಸುವ ಬಗ್ಗೆ.

ಉಲ್ಲೇಖ: ಈ ಕಾರ್ಯಾಲಯದ ಅಧಿಸೂಚನೆ ಸಮ ಸಂಖ್ಯೆ ದಿನಾಂಕ:- 09.10.2015

-000-

ಈ ಕಾರ್ಯಾಲಯದ ಉಲ್ಲೇಖಿತ ಅಧಿಸೂಚನೆಯ ದಿನಾಂಕ:- 09.10.2015 ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 19 ಹಾಗೂ ಸ್ಥಳೀಯೇತರ ವೃಂದಲ್ಲಿ ಖಾಲಿ ಇರುವ 42 ಒಟ್ಟು 61 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡುವ ಸಂಭಂಧ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಷರತ್ತುಗಳಿಗೆ ಒಳಪಟ್ಟು ಪ್ರಚುರಪಡಿಸಲಾಗಿರುತ್ತದೆ. ಮತ್ತು ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳನ್ನು ಕೂಡ ಕರೆಯಲಾಗಿರುತ್ತದೆ.

ಉಲ್ಲೇಖಿತ ಅಧಿಸೂಚನೆಯಲ್ಲಿ ನೀಡಿದ ಷರತ್ತಿನ ಪ್ರಕಾರ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಕ್ರಮ ಸಂಖ್ಯೆ: 02 ರವರು 371(ಜೆ) ಅರ್ಹತಾ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೇಯ ದಿನಾಂಕಕ್ಕಿಂತಲೂ ಮುಂಚೆ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ. ಕಾರಣ ಅವರ ಸ್ಥಳೀಯ ವೃಂದದ ಆಯ್ಕೆಯನ್ನು ಮಾರ್ಪಡಿಸಿ, ಸ್ತಳೀಯೇತರ ವೃಂದದಲ್ಲಿ ಆಯ್ಕೆಗೆ ಪರಿಗಣಿಸಿದೆ.

ಇನ್ನುಳಿದಂತೆ ಸದರಿ ತಾತ್ಕಾಲಿಕ ಆಯ್ಕೆಯನ್ನು ಪ್ರಶ್ನಿಸಿ, ಒಟ್ಟು (5) ಆಕ್ಷೇಪಣೆಗಳು ಸ್ವೀಕೃತಿಯಾಗಿರುತ್ತವೆ. ಎಲ್ಲ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿ, ಆಯ್ಕೆ ಪಟ್ಟಿಯ ಸ್ಥಳೀಯ ವೃಂದದ ಕ್ರಮ ಸಂಖ್ಯೆ: 14 ರ ಕು. ಕಾವೇರಿ ಅರ್ಜಿ ಸಂಖ್ಯೆ: 204612 ಹಾಗೂ ಸ್ಥಳೀಯೇತರ ವೃಂದದ ಕ್ರಮ ಸಂಖ್ಯೆ:- 1: ಮೌನೇಶ ಭೀಮಪ್ಪ ಅರ್ಜಿ ಸಂಖ್ಯೆ: 207461, 2: ನೀರಜ್ ಭೀಮಪ್ಪ ಅರ್ಜಿ ಸಂಖ್ಯೆ: 206679 ಮತ್ತು 37: ಮಂಜುನಾಥ ನೇಸರಗಿ ಅರ್ಜಿ ಸಂಖ್ಯೆ: 207013 ಇವರು ದೂರ ಶಿಕ್ಷಣದಿಂದ ಪಡೆದ ಪ್ರಮಾಣ ಪತ್ರಗಳಾಗಿದ್ದರಿಂದ ಅವರುಗಳ ಆಯ್ಕೆಯನ್ನು ರದ್ದು ಪಡಿಸಿ ಮುಂದಿನ ಅರ್ಹ ಅಭ್ಯಥಿಗಳನ್ನು ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿ, ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಚುರಪಡಿಸಲಾಗಿದೆ.

ಸದರಿ ಅಂತಿಮ ಆಯ್ಕೆ ಪಟ್ಟಿಯನ್ನು website www.ballari.nic.in OR www.bellary.nic.in ನಲ್ಲಿ ನೋಡಿಕೊಳ್ಳಬಹುದು.

26/2

(ಸಮೀರ್ ಶುಕ್ಲ) ಭಾ.ಆ.ಸೇ
ಅಧ್ಯಕ್ಷರು
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಬಳ್ಳಾರಿ

ಪ್ರತಿಯನ್ನು:

1) ಮಹಾಲೇಖಪಾಲರು ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ
2) ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು ಇವರಿಗೆ ಅವಗಾಹನೆಗಾಗಿ ಸಲ್ಲಿಸಿದೆ
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಸೇವೆಗಳು) ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಅವಗಾಹನೆಗಾಗಿ ಸಲ್ಲಿಸಿದೆ
4) ಪ್ರಾದೇಶಿಕ ಆಯುಕ್ತರು, ಕಲಬುರಗಿ/ ಬೆಂಗಳೂರು/ ಬೆಳಗಾವಿ/ ಮೈಸೂರು ವಿಭಾಗ ರವರಿಗೆ ಅವಗಾಹನೆಗಾಗಿ ಸಲ್ಲಿಸಿದೆ
5) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳುಹಿಸುತ್ತಾ ತಮ್ಮ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
6) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬಳ್ಳಾರಿ
7) ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಬಳ್ಳಾರಿ
8) ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳಿಗೆ/ ಜಿಲ್ಲೆಯ ಎಲ್ಲಾ ತಹಶೀಲ್ದಾರರು/ ವಿಶೇಷ ತಹಶೀಲ್ದಾರರುಗಳಿಗೆ ಕಳುಹಿಸಿ ತಮ್ಮ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
9) ಸಂಕಲನಾಧಿಕಾರಿ ಸರ್ಕಾರಿ ಹೊರವಲಯ ಮುದ್ರಣಾಲಯ, ಆರ್.ವಿ. ಕಾಲೇಜು ಅಂಚೆ, 8ನೇ ಮೇನ್, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು 560059 ಇವರಿಗೆ ಕಳುಹಿಸುತ್ತಾ, ಈ ಅಧಿಸೂಚನೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಅದರ 25 ಪ್ರತಿಗಳನ್ನು ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಬಳ್ಳಾರಿ ಇವರಿಗೆ ಒದಗಿಸಲು ಕೋರಿದೆ.
10) ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ ಇವರಿಗೆ ಕಳುಹಿಸುತ್ತಾ ಮೇಲಿನ ವಿಷಯವನ್ನು ಎಲ್ಲ ಸ್ಥಳೀಯ ರಾಜ್ಯಮಟ್ಟದ ದೈನಂದಿನ ಕನ್ನಡ ದಿನ ಪತ್ರಿಕೆಗಳಲ್ಲಿ ಪ್ರಚುರಪಡಿಸಲು ಕೋರಿದೆ.
11) ಈ ಕಾರ್ಯಾಲಯದ ಸೂಚನಾ ಫಲಕಕ್ಕೆ/ ಹೆಚ್ಚುವರಿ ಪ್ರತಿಗಳು ಶಾಖಾ ಕಡತಕ್ಕೆ

ಸಹಿ/-
ಅಧ್ಯಕ್ಷರು
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಬಳ್ಳಾರಿ